ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಯುಷ್ ಆಯ್ದು. [ನಂ. 30.

ಬೆಂಗಳೂರು, ಗುರುವಾರ, ಜುಲೈ ತಾ|| 30, ಸನ್ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮಗೈರೇರಿಂದ ಬೊಡೋಕಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖೆ.

ನೋಟಿಫಿಕೇರ್ಷ್, ತಾರೀಖು 24ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ನಮೂದಾಗಿ ಇರುವ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟು ಪ್ರ್ಯಾಟೇರ್ಷಗಳ ಹುಲ್ಲನ್ನು ಕುಯಿದು ಸಾಗಿಸಿಕೊಳ್ಳುವ ಹಕ್ಕನ್ನು ಸದರೀ ಪ್ರ್ಯಾಟೇರ್ಷಗಳ ಬಾಜೂವಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದಲಾಗಲಿ ರೇಂಜು ಫಾರೆಸ್ಟ್ ಆಫಿಸರವರಿಂದಲಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ತಾಲ್ಲೂಕು.	ಪ್ರ್ಯಾಟೇರ್ಷಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
ಬೆಂಗಳೂರು ..	ಜಕ್ಕೂರು ಆಳಾಳಸಂದ್ರ ..	300	13—8—03	ಪೀಣ್ಯ ಫಾರೆಸ್ಟ್ ಲಾಡ್ಜ್	ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಅಥವಾ ರೇಂಜ್ ಫಾರೆಸ್ಟ್ ಆಫೀಸರರು
	ಬ್ರಹ್ಮಸಂದ್ರ ..	48	ಡಿಟೋ		
	ಬಪ್ಪೆ ಹೆಬ್ಬಾಳ ...	100	15—8—03	ಬೆಂಗಳೂರು	
	ಕೆಂಚನ ಹಳ್ಳಿ ...	77	ಡಿಟೋ		
ನೆಲಮಂಗಲ ...	ಮಾಜೋಹಳ್ಳಿ ..	270	ಡಿಟೋ		
ಬೆಂಗಳೂರು ..	ಮಲತ್ತಹಳ್ಳಿ ..	255	ಡಿಟೋ	ಬೆಂಗಳೂರು	
	ನಾಗರಭಾವಿ ..	250	ಡಿಟೋ		
ನೆಲಮಂಗಲ ...	ಕೃಷ್ಣರಾಜಪುರ ..	423	12—8—03	ನೆಲಮಂಗಲ	
	ಮಾವಿನಕೋಮನಹಳ್ಳಿ ..	435	ಡಿಟೋ		
	ಗೋವಿಂದಪುರ ..	48	ಡಿಟೋ		
	ಕಲ್ಲುಪಾಳ್ಯ ..	106	ಡಿಟೋ		
	ಕೆಂಚನಪುರ ..	535	ಡಿಟೋ		
	ಬಳ್ಳಗೆರೆ	400	ಡಿಟೋ		
	ಭೈರಕಟ್ಟಹಳ್ಳಿ (ಗೊಲ್ಲಹಳ್ಳಿ)	86	ಡಿಟೋ		
	ಬೊಪ್ಪೇನಹಳ್ಳಿ ..	174	ಡಿಟೋ		

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
ಹೊಸಕೋಟೆ ...	ಹಳೇಜಡಿಗೇನಹಳ್ಳಿ ...	455	16—8—03	ಕಾಡಗೋಡಿ	ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಡಿವಿಜನಲ್ ಫಾರೆಸ್ಟ್ ಆಫಿಸರ್ ಅಥವಾ ರೇಂಜ್ ಫಾರೆಸ್ಟ್ ಆಫಿಸರ್
	ನಲ್ಲಾಲ್ ಎ. ಬಿ. ...	734	ಡಿಟೋ		
	ಡಿಟೋ ಸಿ. ..	486	ಡಿಟೋ		
	ಅಪ್ಪಸಂದ್ರ	547	ಡಿಟೋ		
ಆನೇಕಲ್ಲು ..	ಕುಂಬಾರನಹಳ್ಳಿ ...	135½	19—8—03	ಬನ್ನೇರುಗಟ್ಟ	
	ಕಂನಮನಹಳ್ಳಿ ...		ಡಿಟೋ		

ಷರಾ—2. ಹರಾಜು ಖೈದಾದ ಕೂಡ್ಲೆ ಖರೀದಿದಾರನು $\frac{1}{4}$ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ಮಿಕ್ಕಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಜೇರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಖರೀದಿದಾರನನ್ನು ಗುರಿಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವವಿಧದಲ್ಲು ಭಾಗಿಯಾಗುವದಿಲ್ಲ. ಪೂರ್ತಿ ಹಣ ಪಾವತಿ ಮಾಡಿದ ಕೂಡಲೆ ಹುಲ್ಲು ಕಾಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬೆಂಕೀ ವಗೈರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲೀ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟ್ ತಕ್ಸೀರು ನಡದಲ್ಲಿ ಫಾರೆಸ್ಟ್ ರೆಗ್ಯುಲೇಷನ್ ರೀತ್ಯಾ ಶಿಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇಷನ್‌ಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ತಾರೀಖು ಲಾಗಾಯತು 1904ನೇ ಮಾರ್ಚಿ 31ನೇ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕರ್ಕಾರ್ಕಾಹಳ್ಳಿ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ ಮರಳಬೇಕುಪ್ಪೆ ಎಂಬ ಗ್ರಾಮವು ಕಂದಾಯದ ಬಾಕಿಗೋಸ್ಕರ ಕರ್ಕಾರ್ಕಾಹಳ್ಳಿ ತಾಲ್ಲೂಕು ಕಛೇರಿ ಕಟ್ಟಡದಲ್ಲಿ 3—8—03ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜುಲೈ 2ನೇ ತಾರೀಖಿನ ಮೈಸೂರು ಗೆಜೆಟ್ IIನೇ ಭಾಗದಲ್ಲಿ ಘಾಯಿಷಾಗಿರುತ್ತೆ.

ತಾರೀಖು 11ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ದೇವನಹಳ್ಳಿ ತಾಲ್ಲೂಕು ಜೋಡಿ ಸನ್ಯಾಸಿಹಳ್ಳಿ ಗ್ರಾಮದಲ್ಲಿ ಮೆನರ್ಸ್ ಬ್ಲೇಕ್ ಸಾಹೇಬರಿಗೆ ಇರುವ ಹಕ್ಕು ಬಾಧ್ಯತೆಯನ್ನು ರೆವಿನ್ಯೂ ಬಾಕಿಗೋಸ್ಕರ 1903ನೇ ಆಗಸ್ಟ್ 20ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು 1903ನೇ ಇಸವಿ ಜುಲೈ 23ನೇ ಮತ್ತು 29ನೇ ನಂಬರ್ ಮೈಸೂರ ಗೆಜೆಟ್ IIನೇ ಭಾಗದ 396ನೇ ಪೇಜಿನಲ್ಲಿ ಘಾಯಿಷಾಗಿರುತ್ತೆ.

ಇಸ್ತಿಹಾರ್‌ನಾಮಾ.

ಬೆಂಗಳೂರು ತಾಲ್ಲೂಕು ಯೆಲಹಂಕದ ಹೋಬಳಿ ಜೋಡಿ ಮಲ್ಲಸಂದ್ರ ಗ್ರಾಮವು ಸದರಿ ಜೋಡಿದಾರ್ ಗಿರಿಯಮ್ಮನವರು ಜೋಡಿ ಪೊಬಲಗು ಸರ್ಕಾರಕ್ಕೆ ಪಾವತಿ ಮಾಡದೆ ತಪ್ಪಿದ್ದರಿಂದ ಆ ತಾಲ್ಲೂಕು ಅಮಲ್ದಾರ್ರ ರೂಬರೂಬು 1903ನೆಯ ಇಸವಿ ಆಗಸ್ಟ್ 20ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1903ನೇ ಇಸವಿ ಜುಲೈ 23ನೇ ಮತ್ತು 29ನೇ ನಂಬರ್ ಮೈಸೂರ ಗೆಜೆಟ್ IIನೇ ಭಾಗದ 395ನೇ ನಂಬರ್ ಪೇಜಿನಲ್ಲಿ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.